**Spl.C.5092/2021**
**PW.1 CW.1 Jogi**

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಸ್ಪೆಷಲ್ ಕೇಸ್. ನಂ. 5092/2021**

**ಪ್ರಾಸಾ -- 1**

**ಚಾಸಾ – 1**

ಸಾಕ್ಷಿಯ ಹೆಸರು – ಜೋಗಿ
ತಂದೆಯ ಹೆಸರು – ಸುಬ್ಬ
ವಯಸ್ಸು – 50 ವರ್ಷ
ವೃತ್ತಿ – ಕೂಲಿ
ವಿಳಾಸ – ನಾಲ್ಕೇರಿ ಬಣ್ಣನಮಟ್ಟೆ

ದಿಃ 21.08.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ಚಾಸಾ 2 ಮಂಜು ನನ್ನ ಅಣ್ಣನ ಮಗ. ಚಾಸಾ 3 ಭೋಜಿ ನನ್ನ ಪತ್ನಿ. ಚಾಸಾ 4 ಗೌರಿ ನನ್ನ ಸೊಸೆ. ಚಾಸಾ 5 ಗಣಪತಿ ನನ್ನ ಸಾಹುಕಾರರು. ನ್ಯಾಯಾಲಯದಲ್ಲಿರುವ ಎಲ್ಲಾ ಆರೋಪಿಗಳ ಪರಿಚಯ ಇದೆ.

2. ನಾನು ಪರಿಶಿಷ್ಟ ಪಂಗಡದ ಎರವ ಜನಾಂಗಕ್ಕೆ ಸೇರಿದ್ದೇನೆ. ಆರೋಪಿತರು ಕೊಡವ ಹಾಗೂ ಇತರೆ ಮೇಲ್ಜಾತಿಗೆ ಸೇರಿದ್ದಾರೆ. ಹಿಂದಿನಿಂದ ನಮ್ಮಗಳ ಪರಿಚಯ ಆರೋಪಿತರಿಗೆ ಇದೆ.

3. ದಿನಾಂಕ 13.07.2021 ರಂದು ನಾನು, ಚಾಸಾ 2 ಹಾಗೂ 5 ರವರು ಬೇರೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕುಟ್ಟ ಪೊಲೀಸ್ ಠಾಣೆಗೆ ಹೋಗಿದ್ದೇವು, ಸದರಿ ಪ್ರಕರಣ ವಿಚಾರಣೆಯನ್ನು ಮುಗಿಸಿ ವಾಪಸ್ಸು ಬರುವಾಗ ಸಂಜೆ 4-00 ಗಂಟೆಯ ಸಮಯದಲ್ಲಿ

ಕೂಡುರೋಡು ರಸ್ತೆ, ಭರತ್ ರವರ ಅಂಗಡಿಯ ಮುಂದೆ ಬಣ್ಣಮಟ್ಟೆ ಪೈಸಾರಿ ನಾಲ್ಕೇರೆ ನಾವು ಹೋಗುತ್ತಿದ್ದ ಆಟೋವನ್ನು ನ್ಯಾಯಾಲಯದಲ್ಲಿರುವ ಆರೋಪಿತರು ನಮ್ಮನ್ನು ತಡೆದಿದ್ದಾರೆ. ಕೇಸಿಗೆ ಸಂಬಂದಪಟ್ಟಂತೆ ನಮಗೆ ಎಲ್ಲಾ ಆರೋಪಿತರು ನನಗೆ ಹಾಗೂ ಚಾಸಾ 2 ರವರಿಗೆ ಹಲ್ಲೆ ಮಾಡಿದ್ದಾರೆ.

4. ಚಾಸಾ 5 ರವರು ತಡೆಯಲು ಹೋದಾಗ ಅವರಿಂದ ಆಗಲಿಲ್ಲ. ಗಲಾಟೆ ಕೇಳಿ ಚಾಸಾ 3 ಮತ್ತು 4 ರವರು ಬಂದರು. ಅವರಿಗೂ ಸಹ ಬಿಡಿಸುವಾಗ ಅವರ ಮೈಗೆ ಹಾಗೂ ತಲೆಗೆ ಹಲ್ಲೆ ಮಾಡಿದ್ದಾರೆ. ನಂತರ ಕುಟ್ಟ ಪೊಲೀಸ್ ಠಾಣೆಗೆ ಕರೆ ಮಾಡಿ ಘಟನೆಯ ಬಗ್ಗೆ ತಿಳಿಸಿದೆ. ಆನಂತರ ನಾನು ಠಾಣೆಗೆ ಹೋಗಿ ದೂರು ನೀಡಿದ್ದೇನೆ. ನಂತರ ನಾನು ಹಾಗೂ ಚಾಸಾ 2 ರಿಂದ 4 ರವರು ಗಾಯಗಳಾಗಿದ್ದರಿಂದ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇವೆ.

5. ಈಗ ದೂರನ್ನು ನೋಡುತ್ತಿದ್ದು, **ನಿಪಿ 1, 1(ಎ)** ಸಾಕ್ಷಿಯ ರುಜು ಎಂದು ಗುರುತಿಸಲಾಯಿತು. ನಂತರ ಪೊಲೀಸರು ಮಹಜರ್ ಸಲುವಾಗಿ ಘಟನಾ ಸ್ಥಳಕ್ಕೆ ಬಂದಿದ್ದರು. ಚಾಸಾ 6 ಕಾವೇರಪ್ಪ ಹಾಗೂ ಚಾಸಾ 9 ಮಂಜುರವರು ಹಾಜರಿದ್ದರು. ಈಗ ಮಹಜರ್ ನಲ್ಲಿಯ ರುಜುವನ್ನು ನೋಡುತ್ತಿದ್ದು, ಅದು ನನ್ನ ರುಜುವಾಗಿದ್ದು, ಮಹಜರನ್ನು **ನಿಪಿ 2, 2(ಎ)** ಸಾಕ್ಷಿಯ ರುಜು ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ

ಫೋಟೋದಲ್ಲಿ ನಾನು, ಚಾಸಾ 6 ಮತ್ತು 9 ರವರು ಹಾಗೂ ಪೊಲೀಸರು ಇದ್ದು, ಅದನ್ನು ಘಟನಾ ಸ್ಥಳದಲ್ಲಿ ತೆಗೆದಿದ್ದಾರೆ. ಸದರಿ ಪೋಟೋವನ್ನು **ನಿಪಿ 3** ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಕಲಂ 164 ಸಿ ಆರ್ ಪಿ ಸಿ ಹೇಳಿಕೆಯಲ್ಲಿ ನನ್ನ ರುಜು ಇದ್ದು, ಸದರಿ ಹೇಳಿಕೆಯನ್ನು **ನಿಪಿ 4, 4(ಎ)** ಸಾಕ್ಷಿಯ ರುಜು ಎಂದು ಗುರುತಿಸಲಾಯಿತು.

6. ನಂತರ ಪೊಲೀಸರು ನನ್ನನ್ನು ಕರೆಯಿಸಿ ವಿಚಾರಣೆ ಮಾಡಿದ್ದಾರೆ, ಆದರೆ ಈಗ ನನಗೆ ನೆನಪಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

7. ನನ್ನ ಮುಂದುವರೆದ ಹೇಳಿಕೆಯಲ್ಲಿ ಆರೋಪಿತರು ನನ್ನನ್ನು ಹಾಗೂ ಚಾಸಾ 2 ರಿಂದ 4 ರವರನ್ನು ಠಾಣೆಗೆ ಹೋಗಿ ಬಂದಿದ್ದೀರಾ ಯರವ ಸೂಳೆ ಮಕ್ಕಳು ಎಂದು ಸಾರ್ವಜನಿಕರ ಮುಂದೆ ಜಾತಿ ನಿಂದನೆ ಮಾಡಿ ಅವಮಾನಿಸಿದ್ದಾರೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ತಡೆಯಲು ಬಂದ ಚಾಸಾ 3 ಮತ್ತು 4 ರವರಿಗೆ ಆರೋಪಿತರು ಕೈಗಳಿಂದ ಮುಖ ಮತ್ತು ಶರೀರದ ಭಾಗಕ್ಕೆ ಹೊಡೆದು ಕಾಲಿಂದ ಒದ್ದು ನೋವುಂಟು ಮಾಡಿದ್ದಾರೆ ಎಂದು ಹೇಳಿದೆ. ಆರೋಪಿತರು ಚಾಸಾ 3 ಮತ್ತು 4 ರವರಿಗೆ ಮುಖ ಹಾಗೂ ಶರೀರದ ಭಾಗಕ್ಕೆ ಹಲ್ಲೆ ಮಾಡಿ ಕಾಲಿನಿಂದ ಒದ್ದು, ಅವರ ಮಾನಕ್ಕೆ ಚ್ಯುತಿ ಬರುವಂತೆ ಮಾಡಿದ್ದಾರೆ ಎಂದರೆ ಸರಿ. ಈ ಬಗ್ಗೆ ಹೇಳಿಕೆ ನೀಡಿದ್ದೇನೆ.

8. ದಿನಾಂಕ 20.07.2021 ರಂದು ನ್ಯಾಯಾಧೀಶರ ಮುಂದೆ ನಾನು ಹಾಗೂ ಚಾಸಾ 2 ರಿಂದ 6 ರವರು ಹೇಳಿಕೆ ನೀಡಿದ್ದೇವೆ ಎಂದರೆ ಸರಿ. ನಿಪಿ 4 ರಂತೆ ಆರೋಪಿತರು ಹಲ್ಲೆ ಮಾಡಿದ ಬಗ್ಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಶ್ರೀ ವಿ ಎಸ್ ಪಿ ಆರೋಪಿ ಪರ ವಕೀಲರಿಂದ ಇಲ್ಲ**.

9. ಚಾಸಾ 2 ಹಾಗೂ ರವಿಯವರ ನಡುವೆ ಆದ ಗಲಾಟೆಯ ವಿಚಾರದಲ್ಲಿ ಪೊಲೀಸ್ ಠಾಣೆಗೆ ಹೋಗಿದ್ದೇವು. ಸದರಿ ರವಿ ನಮ್ಮ ಊರಿನವರು. ಚಾಸಾ 2 ರವರು ರವಿಯವರೊಂದಿಗೆ ಜಗಳ ಮಾಡಿದ್ದಾರೆ. ಆ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾವುಗಳು ರಾಜಿ ತೀರ್ಮಾನ ಮಾಡಿಕೊಂಡು ಬಂದಿದ್ದೇವೆ.

10. ಚಾಸಾ 2 ಮತ್ತು 4 ರವರು ಚಾಸಾ 5 ರವರ ತೋಟದಲ್ಲಿ ಕೆಲಸ ಮಾಡಿಕೊಂಡು ಅವರ ಲೈನ್ ಮನೆಯಲ್ಲಿ ವಾಸವಿದ್ದಾರೆ. ಚಾಸಾ 5 ರವರು ಒಂದನೇ ಆರೋಪಿಯ ತಂದೆಯ ತಮ್ಮ. ಸದರಿಯವರಿಗೆ ಈಗ ಮಾತುಕತೆ ಇಲ್ಲ, ಮೊದಲು ಇತ್ತು. ಅವರ ನಡುವೆ ಆಸ್ತಿ ವಿಚಾರದಲ್ಲಿ ತಕರಾರು ಇರುವುದು ಗೊತ್ತಿರುವುದಿಲ್ಲ. ಶ್ರೀಮಂಗಲ - ನಾಲ್ಕೇರಿ ರಸ್ತೆಯ ಪೂರ್ವಕ್ಕೆ ಬನ್ನಮಟ್ಟೆ ರಸ್ತೆ ಹಾದು ಹೋಗುತ್ತದೆ. ಅದು ಪೈಸಾರಿ ಕಾಲೋನಿಗೆ ತಲುಪಿ ಮುಂದೆ ಹೋಗುತ್ತದೆ. ಘಟನಾ ಸ್ಥಳದಿಂದ ನಮ್ಮ ಮನೆಗೆ 500 ಮೀಟರ್.

11. ನಮ್ಮ ಮನೆಗೆ ಹೋಗುವ ದಾರಿಯಲ್ಲಿ ಅಕ್ಕ ಪಕ್ಕ ಕಾಫಿ ತೋಟಗಳು ಇವೆ. ನಮ್ಮ ಮನೆಗೆ ಹೋಗಲು ವಾಹನ

ಹೋಗುವ ರಸ್ತೆ ಇದೆ. 10 ನಿಮಿಷದಲ್ಲಿ ಘಟನೆ ಮುಗಿದಿದೆ, ನಮ್ಮ ನಡುವೆ ಮಾತುಕತೆ ಆಗಿಲ್ಲ. ನಾನು ಆಟೋದ ಒಳಗೆ ಇದ್ದೆ ಹೊರಗೆ ಇಳಿಯಲಿಲ್ಲ ಆಗಲೇ ಹಲ್ಲೆ ಮಾಡಿದ್ದಾರೆ. ನಿಖರವಾಗಿ ಯಾರು ಹಲ್ಲೆ ಮಾಡಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಹಲ್ಲೆ ಮಾಡಿದ ಕೂಡಲೇ ನಾನು ಮನೆಯ ಕಡೆ ಓಡಿ ಹೋಗಿದ್ದೇನೆ. ನನ್ನ ಬಟ್ಟೆಗೆ ರಕ್ತ ಆಗಿಲ್ಲ. ನನ್ನ ಎಡಭಾಗದ ತುಟಿಗೆ ಗಾಯ ಆಗಿತ್ತು, ಅರ್ಧ ಹಲ್ಲು ಮುರಿದಿತ್ತು. ಘಟನಾ ಸ್ಥಳದಿಂದ 50 ಅಡಿ ದೂರದಿಂದ ಪೊಲೀಸರಿಗೆ 112 ಗೆ ಕರೆ ಮಾಡಿ ತಿಳಿಸಿದ್ದೇನೆ. 10-15 ನಿಮಿಷದಲ್ಲಿ ಸ್ಥಳಕ್ಕೆ ಪೊಲೀಸರು ಬಂದಿದ್ದಾರೆ, ಆ ಸ್ಥಳದಲ್ಲಿ ಪೊಲೀಸರು ನಮ್ಮನ್ನು ಹಾಗೂ ಆರೋಪಿತರನ್ನು ವಿಚಾರಣೆ ಮಾಡಿದ್ದಾರೆ, ಊರಿನ ಸಾಕಷ್ಟು ಜನ ಸೇರಿದ್ದರು.

12. ಜಂಕ್ಷನ್ ನಲ್ಲಿ ಗಲಾಟೆ ನಡೆದಿದೆ. ಆನಂತರ ಚಾಸಾ 13 ರವರು ಬಂದಿದ್ದಾರೆ. ಅವರು ಬರವಣಿಗೆ ಮಾಡಿಲ್ಲ, ಠಾಣೆಗೆ ಹೋಗಿ ದೂರು ಕೊಟ್ಟಿದ್ದೇನೆ. ಸ್ಥಳದಲ್ಲಿ ಘಟನೆಯ ಬಗ್ಗೆ ವಿವರ ತಿಳಿಸಿದ್ದೇನೆ. ಚಾಸಾ 2 ರಿಂದ 5 ರವರನ್ನು ಪೊಲೀಸರು ಸ್ಥಳದಲ್ಲಿ ವಿಚಾರಣೆ ಮಾಡಿದ್ದಾರೆ. ನಾನು ಹಾಗೂ ಚಾಸಾ 2 ರಿಂದ 5 ರವರು ಠಾಣೆಗೆ ಹೋಗಿದ್ದೇವೆ. ಅವರನ್ನು ಪೊಲೀಸರು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿದ್ದಾರೆ, ಆಗ ರಾತ್ರಿ 7.00 ಗಂಟೆಯ ಸಮಯ.

13. ಮರುದಿನ ಚಿಕಿತ್ಸೆ ಪಡೆದಿದ್ದೇನೆ, ಆ ದಿನ ವೈದ್ಯರು ಇರಲಿಲ್ಲ. ನಾನು ಬೇರೆಯವರ ಮೇಲೆ ಪ್ರಕರಣ ದಾಖಲಿಸಿಲ್ಲ, ನನ್ನ

ಮೇಲೂ ಸಹ ಪ್ರಕರಣ ದಾಖಲು ಇಲ್ಲ. ಮಂಜು, ಗಣೇಶ, ಉದಯ ಹಾಗೂ ಸಿದ್ದು ರವರಿಗೆ ಸಂಬಂಧಪಟ್ಟಂತೆ ರಾಜಿ ಮಾಡಿಕೊಂಡಿದ್ದೇನೆ. ಅದನ್ನು ಕ್ಷಮೆ ಕೇಳಿದ್ದರಿಂದ ಮಗನ ರಕ್ಷಣೆಗಾಗಿ ರಾಜಿ ಮಾಡಿಕೊಂಡಿದ್ದೇನೆ. 2021 ರಲ್ಲಿ ಪಣಿಯರವರ ರಾಜು ಎಂಬುವವರು ನನ್ನ ಮೇಲೆ ಪ್ರಕರಣ ದಾಖಲಿಸಿದ್ದರು, ಅದನ್ನು ರಾಜಿ ಮುಖಂತರ ಇತ್ಯರ್ಥಪಡಿಸಿಕೊಂಡಿದ್ದೇನೆ.

14. ಚಾಸಾ 3 ಗ್ರಾಮ ಪಂಚಾಯತಿಯ ಸದಸ್ಯರು. ಚಾಸಾ 3 ಹಾಗೂ ಗಣೇಶ ರವರ ನಡುವೆ ಹಣಕಾಸಿನ ವ್ಯವಹಾರಕ್ಕೆ ಸಂಬಂಧಪಟ್ಟಂತೆ ದೂರು ದಾಖಲಾಗಿಲ್ಲ. ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ಓದಿ ಹೇಳಿದ ನಂತರ ಸಹಿ ಮಾಡಿದ್ದೇನೆ. ಚಾಸಾ 5 ರವರ ಬಳಿ ಕೆಲಸಕ್ಕೆ ಹೋಗುತ್ತೇನೆ. ಚಾಸಾ 5 ರವರ ಕುಮ್ಮಕ್ಕಿನ ಮೇರೆಗೆ ಆರೋಪಿತರ ವಿರುದ್ದ ವೈಮನಸ್ಸಿನ ಹಿನ್ನೆಲೆಯಲ್ಲಿ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳ ನಮ್ಮ ಮನೆಯಿಂದ ಕಾಣುವುದಿಲ್ಲ. ಆರೋಪಿತರು ನಮ್ಮೊಂದಿಗೆ ಜಗಳ ಮಾಡಿ, ಜಾತಿ ನಿಂದನೆ ಮಾಡಿ, ಚಾಸಾ 3 ಮತ್ತು 4 ಮಾನಕ್ಕೆ ಚ್ಯುತಿ ತಂದಿಲ್ಲ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)